ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.

ಸಿ.ಸಿ. ಸಂಃ **2396/2021**

| | | |
|---|---|---|
| ಸಾಕ್ಷಿಯ ಹೆಸರುಃ | ಶಿವಸ್ವಾಮಿ | DW-1 |
| ತಂದೆಯ ಹೆಸರುಃ | ಬಸವರಾಜು | |
| ವಯಸ್ಸುಃ | 45 ವರ್ಷ | ಪ್ರಮಾಣೀಕರಿಸಿದ ದಿಃ 05.12.2025 |
| ಉದ್ಯೋಗಃ | ವ್ಯಾಪಾರ | |
| ವಾಸ ಸ್ಥಳಃ | ಕೊಪ್ಪ | |

ಮುಖ್ಯ ವಿಚಾರಣೆಃ ಆರೋಪಿ ಪರ ವಕೀಲರಿಂದಃ

1. ದೂರುದಾರರು ನನಗೆ 2008 ರಿಂದ ಪರಿಚಯ. ನಾನು ದೂರುದಾರರಿಂದ ಅನೇಕ ಜನರಿಗೆ ಸಾಲ ಕೊಡಿಸಿರುತ್ತೇನೆ. ಆ ರೀತಿ ಕೊಡಿಸಬೇಕಾದರೆ ಜನರಿಂದ ಹಾಗೂ ನನ್ನಿಂದ ಖಾಲಿ ಚೆಕ್ ಪಡೆಯುತ್ತಿದ್ದರು.
2. ಜನವರು ಹಣ ವಾಪಸ್ ನೀಡಿದ್ದರೂ ಸಹ ದೂರುದಾರರು ಅವರ ಚೆಕ್ ಹಾಗೂ ನನ್ನ ಚೆಕ್ ಗಳನ್ನು ವಾಪಸ್ ನೀಡದೇ ಸತಾಯಿಸುತ್ತಿದ್ದರು. ಸದರಿ ವಿಚಾರವಾಗಿ ಚಂದ್ರಶೇಖರ, ಮಲ್ಲಿಕಾರ್ಜುನ್ ಸ್ವಾಮಿ ಹಾಗೂ ಪ್ರಸಾದ್ ರವರು ನನ್ನ ಮನೆಗೆ ಬಂದು ಗಲಾಟೆ ಮಾಡಿರುತ್ತಾರೆ.
3. ಸದರಿ ವಿಚಾರವಾಗಿ ನಾನು ಮೈಸೂರಿನ ಎಸ್.ಪಿ ರವರಿಗೆ ದೂರು ಸಲ್ಲಿಸಿರುತ್ತೇನೆ. ಆ ಬಗ್ಗೆ ಪೊಲೀಸರು ಬೈಲುಕುಪ್ಪೆ ಠಾಣೆಗೆ ಕರೆಸಿ ಚೆಕ್ಗಳನ್ನು ಪಾರ್ಟಿಗಳಿಗೆ ವಾಪಸ್ ಕೊಡಿಸಿದ್ದರು. ಅವರ ಪೈಕಿ ಮಂಜುನಾಥ, ಗಫಾರ್, ಉಮೇಶ, ಮಣಿಕಂಠ ರವರ ಚೆಕ್ ಗಳನ್ನು ವಾಪಸ್ ನೀಡಿದ್ದಾರೆ.
4. ನನ್ನ ಹಾಗೂ ಗಿರೀಶ ಎಂಬುವವರ ಚೆಕ್ಕನ್ನು ದೂರುದಾರರು ವಾಪಸ್ ನೀಡಿರುವುದಿಲ್ಲ. ಸದರಿಯವರೆಲ್ಲರೂ ಬಡ್ಡಿ ಹಣವನ್ನು ನೀಡಿದ ನಂತರ ನಿಮ್ಮ ಚೆಕ್ ವಾಪಸ್ ನೀಡುವುದಾಗಿ ಠಾಣೆಯಲ್ಲಿ ನಮ್ಮ ಹೇಳಿಕೆ ಬರೆಸಿಕೊಂಡಿರುತ್ತಾರೆ.
5. ಈಗ ಬಡ್ಡಿ ಹಣಕ್ಕಾಗಿ ನನ್ನ ಮೇಲೆ ಹಾಗೂ ಗಿರೀಶ ರವರ ಮೇಲೆ ಮೈಸೂರಿನಲ್ಲಿ ಅವರ ಮಗಳ ಕಡೆಯಿಂದ ದೂರನ್ನು ಹಾಕಿದ್ದಾರೆ.

6. ನಾನು ಅವರಿಗೆ ಯಾವುದೇ ಹಣವನ್ನು ಕೊಡಬೇಕಾಗಿಲ್ಲದಿದ್ದರೂ ಮೇಲೆ ಹೇಳಿದಂತೆ ನನ್ನ ಚೆಕ್ಕನ್ನು ದುರುಪಯೋಗಪಡಿಸಿಕೊಂಡು ಸುಳ್ಳು ದೂರು ನೀಡಿರುತ್ತಾರೆ.
7. ಆದ್ದರಿಂದ ಈ ಸುಳ್ಳು ದೂರನ್ನು ವಜಾ ಮಾಡಬೇಕಾಗಿ ನಾನು ನ್ಯಾಯಾಲಯದಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.
8. ಮೈಸೂರು ಪೊಲೀಸ್ ಅಧೀಕ್ಷಕರಿಗೆ ನೀಡಿದ ದೂರನ್ನು ನಿಡಿ - 1 ಎಂದು ಗುರುತಿಸಲಾಯಿತು.
9. ಚಂದ್ರಶೇಖರ ರವರ ಹೇಳಿಕೆಯನ್ನು ನಿಡಿ - 2 ಎಂದು,
10. ಪ್ರಸಾದ್ ರವರ ಹೇಳಿಕೆಯನ್ನು ನಿಡಿ - 3 ಎಂದು,
11. ಮಲ್ಲಿಕಾರ್ಜುನ್ ಸ್ವಾಮಿ ರವರ ಹೇಳಿಕೆಯನ್ನು ನಿಡಿ - 4 ಎಂದು ಗುರುತಿಸಲಾಯಿತು.

(ಪಾಟೀ ಸವಾಲುಃ ದೂರುದಾರರ ಪರ ವಕೀಲರು ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು)

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು
ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ